OS No. 49/2021

DW-1

**(ಇಂದು ದಿಃ 20-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- ವಾದಿ ಪರ ಶ್ರೀ.HLA ವಕೀಲರಿಂದಃ-</u>**

3ನೇ ಪ್ರತಿವಾದಿ ನನ್ನ ತಾಯಿ. 3ನೇ ಪ್ರತಿವಾದಿ ಮೇಲೆ 2 ವರ್ಷಗಳ ಹಿಂದೆ ರಾಶಿ ಮಷೀನ್ ಬಿದಿತ್ತು ಕಾರಣ ಅವರಿಗೆ ನಿಂತುಕೊಳ್ಳಲು ಆಗುವುದಿಲ್ಲ. ಕಾರಣ ಅವರು ನ್ಯಾಯಾಲಯಕ್ಕೆ ಬಂದಿಲ್ಲ, ಈ ಬಗ್ಗೆ ವೈದ್ಯಕೀಯ ದಾಖಲಾತಿ ಹಾಜರುಪಡಿಸಿಲ್ಲ, ಈ ಸಂಗತಿಯನ್ನು SPA ದಾಖಲಾತಿಯಲ್ಲಿ ಬರೆಸಿಲ್ಲ, ನನ್ನ ತಂದೆಗೆ 4 ಜನ ಸಹೋದರರು, ಇಬ್ಬರು ಸಹೋದರಿಯರು. ಸರ್ವೇ ನಂಬರ 69 ರಲ್ಲಿ 1 , 2 ಮತ್ತು 3 ಹಿ. ಸಾ ಇವೆ. ಸರ್ವೇ ನಂಬರ 69/1 3 ಎಕರೆ ಚಿಲ್ಲರೇ ಗುಂಟೆ ಇದೆ. ಸರ್ವೇ ನಂಬರ 69/2 3 ಎಕರೆ ಚಿಲ್ಲರೇ ಗುಂಟೆ ಇದೆ. ಸರ್ವೇ ನಂಬರ 69/3 3 ಎಕರೆ ಚಿಲ್ಲರೇ ಗುಂಟೆ ಇದೆ. ಸರ್ವೇ ನಂಬರ 58 ರಲ್ಲಿ 7 ಎಕರೆ ಚಿಲ್ಲರೇ ಇದೆ. ಸರ್ವೇ ನಂಬರ 20, 2 ಎಕರೆ ಚಿಲ್ಲರೇ ಗುಂಟೆ ಇದೆ. 5 ಮನೆಗಳು ಇವೆ. ಸದರಿ ಮನೆಗಳು ಸಿದ್ದರಾಮಪ್ಪರವರ ಹೆಸನಲ್ಲಿವೆ. ನನ್ನ ಅಜ್ಜಿ ರಾಮವ್ವ ರವರಿಗೆ ಇತ್ತು. ಸದರಿ ಜಮೀನನ್ನು 5 ಜನ ಸಹೋದರರು ಸೇರಿಕೊಂಡು ಒಬ್ಬ ದಸ್ತಗಿರ್ ರವರಿಗೆ ಮಾರಾಟ ಮಾಡಿದ್ದಾರೆ ಸರ್ವೇ ನಂಬರ 58 ಮುಂಚೆ ನನ್ನ ತಾತ ಸಾಯಬಣ್ಣ ರವರ ಹೆಸರಲ್ಲಿ ಇತ್ತು. ಈಗ ವಾದಿ ಹೆಸರಿನಲ್ಲಿದೆ. ಅದು 3 ಎಕರೆ ಚಿಲ್ಲರೇ ಇತ್ತು , ಅದರ ಪೈಕಿ 1 ಎಕರೆ ಮಾರಾಟ ಮಾಡಿದ್ದಾರೆ . ವಾದಿ 3 ನೇ ಪ್ರತಿವಾದಿಗೆ ಸದರಿ ಜಮೀನನ್ನು ಮಾರಾಟ ಮಾಡಿದ್ದಾರೆ. 1 ಲಕ್ಷ ಚಿಲ್ಲರೇ ಹಣಕ್ಕೆ ಮಾರಾಟ ಮಾಡಿದ್ದಾರೆ. ಖರೀದಿ ಪತ್ರ ಯಾವ ದಿನ ನೋಂದಣಿಯಾಗಿದೆ ಗೊತ್ತಿಲ್ಲ. ಸದರಿ ಮಾರಾಟ ಆಗುವಾಗ ಯಾರು ಯಾರು ಇದ್ದರು ನನಗೆ ಗೊತ್ತಿಲ್ಲ 3 ನೇ ಪ್ರತಿವಾದಿಗೆ ಜಮೀನು ಹೆಚ್ಚು ಬಂದಿರುವ ಕಾರಣ ವಾದಿ 3ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಮಾರಾಟದ ಆಧಾರದ ಮೇಲೆ ನನ್ನ ತಾಯಿಯ ಹೆಸರಿಗೆ ಮುಟೇಷನ್ ಆಗಿದೆ.

ಸಾಕ್ಷಿಗೆ ನಿಡಿ-131 ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿ 5 ಜನರುಗಳ ಹೆಸರುಗಳಿವೆ ಎಂದು ಹೇಳಿರುತ್ತಾರೆ. ಸದರಿ 5 ಜನ ನನ್ನ ತಾತನ ಮಕ್ಕಳು. 5 ಜನರಿಗೆ ಇಬ್ಬರು ಅಕ್ಕತಂಗಿಯರು ಇದ್ದಾರೆ ಎಂದರೆ ಸರಿ. ಸದರಿ ಅಕ್ಕತಂಗಿಯರ ಹೆಸರು ನಿಡಿ-131 ರಲ್ಲಿ ಇಲ್ಲ ಎಂದರೆ ಸರಿ . ನಿಡಿ-131 ರ ಪ್ರಕಾರ ಹೆಣ್ಣು ಮಕ್ಕಳಿಗೆ ಭಾಗ ಕೊಟ್ಟಿಲ್ಲ ಎಂದರೆ ಸರಿ. ನನ್ನ

ಅತ್ತೆಯರ ಹೆಸರು ಮಲ್ಲಮ್ಮ ಮತ್ತು ಈರಮ್ಮ. ಅವರಿಗೆ ಭಾಗ ಬೇಕು ಎಂದು ಕೇಳಿದಾಗ ಅವರು ಮದುವೆಯಲ್ಲಿ ನಮಗೆ ಎಲ್ಲಾ ಕೊಟ್ಟಿದ್ದೀರಿ ಭಾಗ ಬೇಡ ಎಂದು ಹೇಳಿದರು. ಈರಮ್ಮ ತೀರಿ ಹೋಗಿದ್ದಾರೆ. 1ನೇ ಪ್ರತಿವಾದಿ ನನ್ನ ದೊಡ್ಡಪ್ಪ ವಿರಭದ್ರಪ್ಪನ ಮಗ. ನನ್ನ ಅತ್ತೆಯರು 1ನೇ ಪ್ರತಿವಾದಿಗಿಂತ ದೊಡ್ಡವರು. ನನ್ನ ಅತ್ತೆಯವರು ಭಾಗ ಬೇಡ ಎಂದು ದಾಖಲಾತಿ ಬರೆದುಕೊಟ್ಟಿಲ್ಲ, ನಿಡಿ-131 ಈರಣ್ಣಪ್ಪ ದೇಸಾಯಿ ಬರೆದಿದ್ದಾರೆ. ಈರಣ್ಣಪ್ಪ ದೇಸಾಯಿ ಈಗ ತೀರಿ ಹೋಗಿದ್ದಾರೆ. ನಿಡಿ-131 ಕ್ಕೆ ಸಾಕ್ಷಿದಾರರಾಗಿ ನಾಗೇಂದ್ರಪ್ಪ , ಶಿವಯ್ಯ , ಅಯ್ಯಣ್ಣ ಗುಂಡಪ್ಪ ಮತ್ತು ಶಿವಯ್ಯ ಸಹಿ ಮಾಡಿದ್ದಾರೆ. ಯಾವುದೇ ದಾಖಲಾತಿ ಬರೆಯಬೇಕಾದರೆ ಬರವಣಿಗೆ ಮಾಡಿದವರು ಸಾಕ್ಷಿದಾರರಾಗಿ ಸಹಿ ಮಾಡುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-131 , ದಿನಾಂಕ 05.04.1981 ರಂದು ಆಗಿದೆ. ನಿಡಿ-131 ಸಾಕ್ಷಿದಾರರನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ, 1981 ರಲ್ಲಿ ಸೇಡಂನಲ್ಲಿ ಸಬ್ ರೆಜಿಸ್ಟರ್ ಕಚೇರಿ ಇತ್ತು ಎಂದರೆ ಸರಿ. ನಿಡಿ-131 ನ್ನು ನೋಂದಣಿ ಮಾಡಬೇಕಾಗಿತ್ತು ಎಂದರೆ ಸರಿಯಲ್ಲ, ನಿಡಿ-131 ನೋಂದಣಿ ಆಗಿಲ್ಲ ಮತ್ತು ಅದಕ್ಕೆ ಮುದ್ರಾಂಕ ಶುಲ್ಕ ಪಾವತಿ ಮಾಡಿಲ್ಲ ಎಂರದೆ ಸರಿ. 5 ಜನ ಸಹೋದರರು ಮತ್ತು ಸಾಕ್ಷಿದಾರರು ನಿಡಿ-131 ಕ್ಕೆ ಸಹಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಿಡಿ-131 ನ್ನು ನಾವು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ, ವಿಭಾಗ ಮಾಡಬೇಕಾದರೆ ಎಲ್ಲಾ ಜಮೀನುಗಳನ್ನು ಮತ್ತು ಮನೆಗಳನ್ನು ಸೇರಿಸಿ ಮಾಡಬೇಕಾಗುತ್ತದೆ ಆದರೆ ನಾವು ಆ ರೀತಿ ಎಲ್ಲಾ ಆಸ್ತಿಗಳನ್ನು ಸೇರಿಸದೆ ನಿಡಿ-131 ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ,

**(ವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದು ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**

OS No. 49/2021

DW-1